# ಶಿಕ್ಷಿಸುವುದು ಶಿಕ್ಷಣವಲ್ಲ

■ ನಾಗಸಿಂಹ ಜಿ. ರಾವ್

'ದಂಡಂ ದಶಗುಣಂ' (ಏಪ್ರಿಲ್ 20; ಲೇ: ಸುಮಾ ರಮೇಶ್) ಲೇಖನ ಶಾಲಾಶಿಕ್ಷೆಯನ್ನು ನೇರವಾಗಿ ಮತ್ತು ಪರೋಕ್ಷವಾಗಿ ವೈಭವೀಕರಿಸಿ, ನಂತರ ಒಪ್ಪಿತವಾಗಿ ಘಟಿಸುವ ಕ್ರಿಯೆ ಎಂದು ನಂಬಿಸುವ ಮಂದಹಾಸ ಲೇಖನ! ಲೇಖಕಿ ಉತ್ತಮ ಉದಾಹರಣೆಗಳನ್ನು ನೀಡಿದ್ದಾರೆ. ಕೆಲವು ಅಂಕಿಅಂಶಗಳನ್ನು ನೀಡಿ ಶಾಲಾ ಶಿಕ್ಷೆಯಿಂದಾಗುವ ಋಣಾತ್ಮಕ ಪರಿಣಾಮಗಳ ಬಗ್ಗೆಯೂ ಅವರು ಬರೆಯಬಹುದಿತ್ತು.

ಕೊಲ್ಕತ್ತಾ ನಗರದಲ್ಲಿ ಒಬ್ಬ ಬಾಲಕ ಶಾಲೆಯಲ್ಲಿ ಶಿಕ್ಷಕರಿಂದ ಅವಮಾನಿತನಾದ. ಆ ಅವಹೇಳನ ಬಾಲಕನ ಮನಸ್ಸಿನ ಮೇಲೆ ತೀವ್ರ ಪ್ರಭಾವ ಬೀರಿತು. ಮನೆಗೆ ಬಂದವನೇ ರೂಮ್ ಸೇರಿ ನೇಣು ಬಿಗಿದುಕೊಂಡು ಮರಣ ಹೊಂದಿದ. ಆ ಪ್ರಕರಣ ದೇಶದಲ್ಲಿ ಬಹಳ ದೊಡ್ಡ ಸಂಚಲನವನ್ನೇ ಸೃಷ್ಟಿಸಿತ್ತು. ಅದನ್ನು ಗಮನಿಸಿದ 'ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ' ಮತ್ತು 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ', ದೇಶದ ಶಾಲೆಗಳಲ್ಲಿ ಶಿಕ್ಷಣದ ಹೆಸರಿನಲ್ಲಿ ನೀಡಲಾಗುವ ಶಿಕ್ಷೆಯ ಬಗ್ಗೆ ಅಧ್ಯಯನ ನಡೆಸಿತು. 'ಭಾರತದಲ್ಲಿ ಮಕ್ಕಳ ಮೇಲಿನ ದೌರ್ಜನ್ಯ–2007' ಅಧ್ಯಯನದಿಂದ ಹೊರಬಂದ ಆಘಾತಕಾರಿ ವಿಷಯವೆಂದರೆ, ಶಿಕ್ಷೆಗೆ ಹೆದರಿ ಶೇ. 30ರಷ್ಟು ಮಕ್ಕಳು ಶಾಲೆಗಳಿಂದ ಹೊರಬಂದಿದ್ದಾರೆ, ಶಿಕ್ಷಣವನ್ನು ನಿಲ್ಲಿಸಿದ್ದಾರೆ ಎನ್ನುವುದು. ಶಿಕ್ಷೆ ಹಲವು ಮಕ್ಕಳ ಶಿಕ್ಷಣಕ್ಕೆ ಮಾರಕ ಎಂಬುದನ್ನು ನಾವು ಮರೆಯಬಾರದು.

ಶಾಲೆಗಳಲ್ಲಿ ಆಗುವ ಶಿಕ್ಷೆ ಮತ್ತು ಅವಮಾನ ಮಕ್ಕಳ ಮನಸ್ಸಿನಲ್ಲಿ ಆಳವಾದ ಗಾಯವನ್ನು ಉಂಟುಮಾಡುತ್ತದೆ. ಹೊಡೆದು–ಬೈದು ಭಯದಿಂದ ಕಲಿಸುವ ಶಿಕ್ಷಣ ಮಕ್ಕಳ ಮನಸ್ಸನ್ನು ವಿಕಾಸಗೊಳಿಸುವುದಿಲ್ಲ. ಮೇಷ್ಟ್ರು ಅಥವಾ ಮೇಡಂ ಹೊಡೆದು ಕಲಿಸಿದರು ಎಂಬುದು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಭಯದ ವಾತಾವರಣ ಮಕ್ಕಳ ಮೇಲಾಗುವ ಕಿರುಕುಳ, ದೌರ್ಜನ್ಯ, ಹಲ್ಲೆಗಳನ್ನು ಮುಚ್ಚಿಹಾಕುತ್ತದೆ. ಅದರಲ್ಲೂ ಶಾಲೆಗಳಲ್ಲಿ ಮಕ್ಕಳ ಮೇಲಾಗುವ ಲೈಂಗಿಕ ಕಿರುಕುಳದ ಅನೇಕ ಪ್ರಕರಣಗಳು ವರದಿ ಆಗುವುದಿಲ್ಲ. ಅಂಗವಿಕಲ ಮಕ್ಕಳನ್ನು ಕುಂಟ, ಕುರುಡ, ಕಿವುಡ ಎಂದು ಕರೆಯುತ್ತಿದ್ದ ಶಿಕ್ಷಕರು ಆ ಮಕ್ಕಳ ಆತ್ಮವಿಶ್ವಾಸ, ಸ್ವಮೌಲ್ಯವನ್ನು ಕುಗ್ಗಿಸುತ್ತಿದ್ದೇವೆ ಎಂದು ಚಿಂತಿಸುತ್ತಲೇ ಇರಲಿಲ್ಲ ಎಂದೂ ಅಧ್ಯಯನ ತಿಳಿಸಿದೆ. ಹೊಡೆಯುವುದರಿಂದ ಮಕ್ಕಳಲ್ಲಿ ನಕಾರಾತ್ಮಕ ಭಾವನೆ ಬೇರೂರುವುದಲ್ಲದೇ, ಶಿಕ್ಷೆಗೊಳಗಾದ ಮಕ್ಕಳು ಕೂಡ ಮುಂದಿನ ದಿನಗಳಲ್ಲಿ ಹಿಂಸಾತ್ಮಕ ಮನೋಭಾವ ರೂಢಿಸಿಕೊಳ್ಳುವ ಅಪಾಯವೂ ಇರುತ್ತದೆ.

'ಶಿಕ್ಷೆ ನೀಡದೆ ಪಾಠ ಮಾಡಲಾಗುವುದಿಲ್ಲ, ಹೊಡೆಯುವುದು ನಮ್ಮ ಹಕ್ಕು' ಎಂದು ನಂಬಿರುವ ಶಿಕ್ಷಕರು 'ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ' ಮತ್ತು 'ನಿಮ್ಹಾನ್ಸ್' ಸಂಸ್ಥೆ ಸಿದ್ಧಪಡಿಸಿರುವ 'ಮಕ್ಕಳಸ್ನೇಹಿ ಬೋಧನಾ ವಿಧಾನದ ಕೈಪಿಡಿ'ಯನ್ನು ಗಮನಿಸಬೇಕು.

ಈಗ ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷೆ ನೀಡಿದರೆ ಗಮನಿಸಲು 'ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ' (1989) ಇದೆ. 'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ'ಯ (2009) 'ವಿಭಾಗ 17'ರಲ್ಲಿ, ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷೆ ಆಗುವುದು, ಮಾನಸಿಕ ನೋವಾಗುವುದನ್ನು ನಿಷೇಧಿಸಿದೆ. 'ಮಕ್ಕಳ ನ್ಯಾಯ (ರಕ್ಷಣೆ–ಪೋಷಣೆ) ಕಾಯ್ದೆ' (2015) ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ಮೇಲಾಗುವ ಶಿಕ್ಷೆಯನ್ನು ನಿಷೇಧಿಸಿದೆ.

'ಮಂದಹಾಸ' ಬರಹದ ಲೇಖನದ ಕೊನೆಯ ಸಾಲುಗಳು, ದಂಡನೆಯ ಸ್ಟ್ರೋಕ್‌ಗಳು ಬದುಕು ನೀಡುವ ಪೆಟ್ಟನ್ನು ದಿಟ್ಟತನದಿಂದ ಎದುರಿಸಲು ಸಹಾಯ ಮಾಡುತ್ತವೆ ಎಂದಿದೆ. ಆದರೆ ಹಲವು ಮಕ್ಕಳ ಬದುಕು ಶುರುವಿನಲ್ಲೇ ಮುದುಡಿಹೋದ ಸಾವಿರಾರು ಉದಾಹರಣೆಗಳು ನಮ್ಮಲ್ಲಿವೆ. 'ಮಕ್ಕಳು ಶಿಲೆಗಳಿದ್ದಂತೆ; ಅವರನ್ನು ಕೆತ್ತಿ ಶಿಲ್ಪ ಮಾಡುವ ಶಿಲ್ಪಿಗಳು ಶಿಕ್ಷಕರು' ಎನ್ನುವ ವಾಕ್ಯವನ್ನು ನಾವು ಮನಸ್ಸಿನಿಂದ ತೆಗೆದುಹಾಕಬೇಕು. ಮಕ್ಕಳು ಹೂತೋಟದ ಗಿಡಗಳು ಹಾಗೂ ಅವರನ್ನು ಅಕ್ಕರೆಯಿಂದ ಪಾಲಿಸುವ ತೋಟದ ಮಾಲಿಗಳು ಶಿಕ್ಷಕರು.

ಮಕ್ಕಳಿಗೆ ಶಿಕ್ಷೆ, ಶೋಷಣೆ ಇಂತಹ ವಿಚಾರಗಳನ್ನು ವೈಭವೀಕರಿಸುವುದನ್ನು ನಿಲ್ಲಿಸೋಣ. ಇಂದಿನ ಮಕ್ಕಳು ಇಂದಿನ ಪ್ರಜೆಗಳೂ ಹೌದು. ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಕರ್ತವ್ಯ. ■

